# ಸಮನ್ವಯ

CPI

24ನೇ

ರಾಜ್ಯ ಸಮ್ಮೇಳನ, ಹಾಸನ

25-27 ಸೆಪ್ಟಂಬರ್ 2022

ಕೆಂಬಾವುಟ

ವಿಶೇಷ ಸಂಚಿಕೆ -2022

ಕೆಂಬಾವುಟ

ವಿಶೇಷಾಂಕ 2022

ಸಂಪುಟ : 49

ಸಂಚಿಕೆ : 1-8

ಬೆಲೆ : ರೂ. 30/-

ಒಟ್ಟು ಪುಟಗಳು: 112

ದಿನಾಂಕ: 25-09-2022

# ಪರಿವಿಡಿ

| | | |
|---|---|---|
| ರೈತ-ಕಾರ್ಮಿಕರ ಐಕ್ಯ ಚಳವಳಿಗಳು ಇನ್ನಷ್ಟು ಬಲಗೊಳ್ಳಲಿ | ಶಿವರಾಜ ರಾ. ಬಿರಾದಾರ | 06 |
| ಅಮೃತಘಳಿಗೆಯಲ್ಲಿ ವಿಷದ ಗುಳಿಗೆ | ಡಾ. ಸಿದ್ದನಗೌಡ ಪಾಟೀಲ | 08 |
| ರಾಷ್ಟ್ರೀಯ ಬಹು ಆಯಾಮಗಳ ಬಡತನದ... | ಎಮ್.ಸಿ. ಡೋಂಗ್ರೆ | 15 |
| ಸಮಾಜಿಕ ಸಬಲಿಕರಣ, ಸಾಮಾಜಿಕ ಸುಧಾರಣೆ | ಡಾ. ಪ್ರಕಾಶ ದೇಸಾಯಿ | 25 |
| ಕನ್ನಡ ಸಾಹಿತ್ಯದಲ್ಲಿ ಸಮಾನತೆ ಮತ್ತು ಸಹಿಷ್ಣುತೆ | ಎಸ್.ಪಿ. ಮೂಲೆಮನೆ | 31 |
| ಆದ್ಯತೆಯಾಗಲಿ ಮಹಿಳಾ ಉದ್ದೇಶಿತ... | ರೂಪ ಹಾಸನ | 39 |
| ಹಸಿವಿನಿಂದ ಸತ್ತೋರ ಮೊದಲ ರಾಜ್ಯ | ಡಾ. ಬಿ.ಆರ್.ಮಂಜುನಾಥ್ | 45 |
| ಭಾರತದ ಜನತೆಯಾದ ನಾವು.... | ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ | 51 |
| ಕರ್ನಾಟಕದ ರಾಜಕಾರಣದಲ್ಲಿ ಕೋಮುವಾದ | ಡಾ. ಕೆ. ಷರೀಫಾ | 61 |
| ಶರಣರ ಕಾಯಕ ಸಿದ್ಧಾಂತದ ಆಶಯ- ಸಾಮಾಜಿಕ.... | ಪ್ರೊ. ಸಿ.ವಿ. ಪಾಟೀಲ | 67 |
| ತಾಯಿ ಹಾಗು ತಾಯ್ನಾಡಿನ ಭೂಮಿ ಮಡಿಲು... | ಜಿ.ಬಿ. ಆನಂದ | 75 |
| ಸಂಗಾತಿ ಪಿ.ಎಂ.ನಾರಾಯಣ ಮೂರ್ತಿ...... | ವಿ. ಕುಕ್ಯಾನ್ | 79 |
| ಬಂಡಾಯ ಸಾಹಿತ್ಯದ ವಿವಿಧ ನೆಲೆಗಳು | ಡಾ. ವೆಂ. ಶ್ರೀನಿವಾಸಮೂರ್ತಿ | 83 |
| ಈ ಬ್ರಾಂಡಿನ ಬಗ್ಗೆ ನಿಮಗೆಷ್ಟು ಗೊತ್ತು.... | ಕೀರ್ತಿ ಕೊಲಾರ್ | 87 |
| ಜನ್ಮಶತಾಬ್ದಿ ಸಂದರ್ಭದಲ್ಲಿ ಕಾ॥ ದಾಸ ಸೇರಿಗಾರರ... | ಶಿವಾನಂದ ಉಡುಪಿ | 93 |
| ಕಲ್ಯಾಣ ಕರ್ನಾಟಕ: ಕಮ್ಯುನಿಸ್ಟ್ ಚಳವಳಿಯ | ಸನತ್ ಕುಮಾರ ಬೆಳಗಲಿ | 99 |
| ಸಲ್ಮಾನ್ ರಶ್ದಿ ಮೇಲಿನ ಆಕ್ರಮಣ- ಮತ್ತೊಂದು | ಮ. ಶ್ರೀ.ಮುರಳಿ ಕೃಷ್ಣ | 103 |

ಕವನಗಳು – 23, 29, 35, 49, 71, 85, 97, 105

ಸಂಪಾದಕರು
ಶಿವರಾಜ ರಾ. ಬಿರಾದಾರ

ಸಂಪಾದಕ ಮಂಡಳಿ
ಪಿ. ವಿ. ಲೋಕೇಶ್
ಮ. ಶ್ರೀ ಮುರಳಿ ಕೃಷ್ಣ
ಎಚ್. ವಿ. ರಾವ್
ಜ್ಯೋತಿ ಎ.
ಪಿ. ಷಣ್ಮುಖಸ್ವಾಮಿ
ಎಂ. ಸಿ. ಡೋಂಗ್ರೆ
ಬಿ. ಅಮ್ಜದ್
ಅಶ್ವತ್ಥ್ ನಾರಾಯಣ್

# ಸಾಮಾಜಿಕ ಸಬಲೀಕರಣ, ಸಾಮಾಜಿಕ ಸುಧಾರಣೆ ಮತ್ತು ಏಕತೆ



ಡಾ. ಪ್ರಕಾಶ ದೇಸಾಯಿ

ಸಾಮಾಜಿಕ ಸಬಲಿಕರಣವೆಂಬ ಪರಿಕಲ್ಪನೆಯನ್ನು ಅಥವಾ ಪ್ರಕ್ರಿಯೆಯನ್ನು ಒಂದೇ ಆಯಾಮದಿಂದ ಅರ್ಥೈಸಿಕೊಳ್ಳಲಾಗುವದಿಲ್ಲ. ಈ ಪರಿಕಲ್ಪನೆ ಅಥವಾ ಪ್ರಕ್ರಿಯೆಯನ್ನು ಸಮಗ್ರವಾಗಿ ತಿಳಿದುಕೊಳ್ಳಬೇಕು. ಕೇವಲ ರಾಜಕೀಯ ಪ್ರಾತಿನಿಧ್ಯವನ್ನು ಸಾಮಾಜಿಕ ಸಬಲಿಕರಣವೆಂದು ತಿಳಿದರೆ ಸಬಲಿಕರಣದ ಮೂಲ ಉದ್ದೇಶ ಈಡೇರುವದಿಲ್ಲ. ಯಾವುದೋ ಒಬ್ಬ ವ್ಯಕ್ತಿ ರಾಜಕೀಯ ಪ್ರಾತಿನಿಧ್ಯ ಪಡೆದುಕೊಂಡರೆ ಅವನ ಅಥವಾ ಅವಳ ಸಮುದಾಯ ಸಂಪೂರ್ಣವಾಗಿ ಸಬಲವಾಗಿ ಆತ್ಮಸ್ಥೈರ್ಯ ಮತ್ತು ಗೌರವದಿಂದ ಬದುಕುತ್ತಿದೆ ಎಂದು ಹೇಳಲಾಗದು. ಈ ರೀತಿ ಹೇಳಲು ಅನೇಕ ಉದಾಹರಣೆಗಳನ್ನು ಪುರಾವೆಗಳನ್ನಾಗಿ ಕೊಡಬಹುದು. ಸಾಮಾಜಿಕ ಸಬಲಿಕರಣದ ವಿಷಯ ಪ್ರಸ್ತಾವವಾದಾಗ ಅನೇಕ ವಿಷಯಗಳು ನಮ್ಮ ಗಮನಕ್ಕೆ ಬರುತ್ತವೆ. ಸಬಲಿಕರಣದ ಕುರಿತು ಆಧುನಿಕ ಭಾರತದ ರಾಜಕೀಯ ಚಿಂತಕರು ಮಾಡಿರುವ ಅವಲೋಕನಗಳಿಂದ ಪ್ರಾರಂಭವಾಗಿ ಇತ್ತೀಚಿನ ದಿನಗಳಲ್ಲಿ ಭಾರತೀಯ ಜನತಾ ಪಕ್ಷವು ಮಾಡುತ್ತಿರುವ ಪ್ರಯತ್ನಗಳನ್ನು ದೇಶದ ಸಾರ್ವಜನಿಕ ರಂಗದಲ್ಲಿ ಅತಿಸೂಕ್ಷ್ಮವಾಗಿ ವಿಶ್ಲೇಷಿಸಲಾಗುತ್ತಿದೆ. ಆಧುನಿಕ ಭಾರತದ ರಾಜಕೀಯ ಮತ್ತು ಸಾಮಾಜಿಕ ಚಿಂತಕರಲ್ಲಿ ದಯಾನಂದ ಸರಸ್ವತಿಯವರಿಂದ ಪ್ರಾರಂಭವಾಗಿ, ಫುಲೆ, ವಿವೇಕಾನಂದ, ಗಾಂಧಿವರೆಗೆ ಜಾತಿ ವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಖಂಡಿಸಲಾಯಿತು. ಈ ಎಲ್ಲ ಚಿಂತಕರು ಹಿಂದು ಸಮಾಜದ ಸುಧಾರಣೆಯಲ್ಲಿ ಮತ್ತು ಬದಲಾವಣೆಯಲ್ಲಿ ಬಹಳಷ್ಟು ಪ್ರಯತ್ನ ಮಾಡಿದರು.

ಹಿಂದು ಸಮಾಜದ ಸುಧಾರಣೆ ಅಥವಾ ಬದಲಾವಣೆಯಲ್ಲಿ ಸಾಂಸ್ಕೃತಿಕ ರಾಷ್ಟ್ರವಾದಿ ಶಕ್ತಿಗಳಾದ ಹಿಂದು ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಗಮನಾರ್ಹ ಪಾತ್ರವನ್ನು ಸ್ವತಂತ್ರ ಪೂರ್ವ ದಿನಗಳಲ್ಲಿ ವಹಿಸಲಿಲ್ಲ. ಸಾಂಸ್ಕೃತಿಕ ರಾಷ್ಟ್ರವಾದಿ ಚಿಂತಕರಾದ ವಿನಾಯಕ ಸಾವರ್ಕರ ಮತ್ತು ಇತರರು ಜಾತಿ ವ್ಯವಸ್ಥೆಯ ಕುರಿತು ವಿಮರ್ಷಾತ್ಮಕವಾಗಿ ಮಾತನಾಡಿರಬಹುದು. ಆದರೆ, ಫುಲೆ, ಗಾಂಧಿ, ಅಂಬೇಡ್ಕರ ತರಹ ಸಾಂಸ್ಥಿಕ ರೂಪದಲ್ಲಿ ಜಾತಿ ವ್ಯವಸ್ಥೆಯ ವಿರೋಧ ಗುರುತಿಸುವಂತಹ ಕೆಲಸ ಮಾಡಲಿಲ್ಲ. ದೇಶ ಸ್ವತಂತ್ರಗೊಂಡು 75 ವರ್ಷಗಳಾದವು. ಈ ಅವಧಿಯಲ್ಲಿಯೂ ಹಿಂದು ಧರ್ಮ ಮತ್ತು ಸಮಾಜದ ಆಧಾರದ ಮೇಲೆ ಮೇಲಿಂದ ಮೇಲೆ ನಿರೂಪಣೆಗಳನ್ನು ತರುವ ಸಾಂಸ್ಕೃತಿಕ ರಾಷ್ಟ್ರವಾದಿ ಸಂಘಟನೆಗಳು ಜಾತಿ ಸಮಾನತೆಯ ವಿಷಯದಲ್ಲಿ ಅಥವಾ ಸಾಮಾಜಿಕ ಒಳಗೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ತನ್ನದೆಯಾದ ಮಹತ್ತರ ಕೊಡುಗೆ ನೀಡಿಲ್ಲ. ಕಳೆದ ಮೂರು ದಶಕಗಳ ಇತಿಹಾಸವನ್ನು ಗಮನಿಸಿದಾಗ ಇವುಗಳ ವಿಚಾರ ಮತ್ತು ಚಟುವಟಿಕೆಯಿಂದ ಸಮಾಜದಲ್ಲಿ ಸಮನ್ವಯ ಮೂಡದೆ ಬೇರೆ ತರಹದ ಪರಿಣಾಮ ಉಂಟಾಗಿರುವದೇ ಜಾಸ್ತಿ.

ಅಂಬೇಡ್ಕರ ಅವರು ಸಮಾಜದಲ್ಲಿರುವ ಸಂಪ್ರದಾಯವಾದಿ ಶಕ್ತಿಗಳ ಸಮಾಜ ಬದಲಾವಣಾ ವಿರೋಧಿ ಮನಸ್ಸನ್ನು ಅರಿತುಕೊಂಡು ಬಹಿಷ್ಕೃತ ಸಮುದಾಯಗಳನ್ನು ಸಬಲ ಮಾಡಲು ಪ್ರಜಾಸತ್ತಾತ್ಮಕ ಸಂವಿಧಾನ ಜಾರಿಗೆ ಬರುವಲ್ಲಿ ಮಹತ್ತರ ಪಾತ್ರವವನ್ನು ವಹಿಸಿ ಅದರ ಮುಖಾಂತರ ಮೀಸಲಾತಿಯನ್ನು ಪರಿಚಯಿಸಿದರು. ಮೀಸಲಾತಿಯ ಜೊತೆಗೆ ಸಮಾಜದಲ್ಲಿ ಭ್ರಾತೃತ್ವದ ಕಲ್ಪನೆಯ ಆಚರಣೆಯ ಮೂಲಕ ದೇಶವು ಪ್ರಬುದ್ಧ ಭಾರತವಾಗಬಹುದು ಎಂಬುವದು ಅವರ ಆಶಯವಾಗಿತ್ತು.

ರಾಜಕೀಯ ಪ್ರತಿನಿಧಿ ಸಂಸ್ಥೆಗಳಲ್ಲಿ, ಸರಕಾರಿ ಉದ್ಯೋಗದಲ್ಲಿ, ಶೈಕ್ಷಣಿಕ ಸಂಸ್ಥೆಗಳ ಪ್ರವೇಶದಲ್ಲಿ ಸಾಮಾಜಿಕವಾಗಿ ಹಿಂದುಳಿದ ಜನರಿಗೆ ಮೀಸಲಾತಿಯನ್ನು, ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಜನಾಂಗದ ಜನರಿಗೆ ಒದಗಿಸುವ ಮೂಲಕ ಅವರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲಿಕರಣ ಮಾಡಬಹುದು ಎಂಬುವ ವಿಶ್ವಾಸ ಮೊದಲೂ ಇತ್ತು, ಈಗಲೂ ಇದೆ. ಈ ವಿಶ್ವಾಸದ ಬಗ್ಗೆ ಯಾವುದೇ ಎರಡನೇಯ ಅಭಿಪ್ರಾಯವಿಲ್ಲ. ಸ್ವತಂತ್ರ ಭಾರತದ ಕಳೆದ 75 ವರ್ಷಗಳಲ್ಲಿ ಹಿಂದುಳಿದ ಜನರ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯಲ್ಲಿ ಮೀಸಲಾತಿಯು ಬಹು ಮುಖ್ಯವಾದ ಪಾತ್ರ ವಹಿಸಿದೆ. ಆದರೆ, ಈ ಆಧಾರದ ಮೇಲಿನ ಸಾಮಾಜಿಕ ಬದಲಾವಣೆಗೆ ಮೇಲ್ವರ್ಗದ ಸಮಾಜ ಯಾವ ರೀತಿ

ಸ್ಪಂದಿಸಿದೆ ಎಂಬುವದು ತಿಳಿದುಕೊಳ್ಳಬೇಕು. ಸಮಾಜದಲ್ಲಿ ಕೆಲವು ಸಮುದಾಯಗಳು ಸಮಾನತೆ ಇಲ್ಲದೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಏಕೆ ಹಿಂದುಳಿದವು ಎಂದು ಪ್ರಶ್ನಿಸದೆ ಅವುಗಳ ಸಬಲಿಕರಣಕ್ಕಾಗಿ ಒದಗಿಸಿರುವ ಮೀಸಲಾತಿಯನ್ನು ಸಂಪ್ರದಾಯವಾದಿ ಮೇಲ್ವರ್ಗದ ಶಕ್ತಿಗಳು ಒಮ್ಮೆ ಪರೋಕ್ಷವಾಗಿ ಕೆಲವೊಮ್ಮೆ ಅಪರೋಕ್ಷವಾಗಿ ವಿರೋಧಿಸುತ್ತಾ ಬಂದಿವೆ. 1990 ದಶಕದ ಪ್ರಾರಂಭದಲ್ಲಿ ಮಂಡಲ ಆಯೋಗದ ಪ್ರಕಾರ ಆಗಿನ ಕೇಂದ್ರ ಸರ್ಕಾರವು ಇತರೆ ಹಿಂದುಳಿದ ಜಾತಿಯ ಜನರಿಗೆ ಉದ್ಯೋಗ ಸೇವೆಗಳಲ್ಲಿ ಮೀಸಲಾತಿಯನ್ನು ಜಾರಿಗೆ ತಂದಿತು. ಈ ನಿರ್ಧಾರದ ವಿರುದ್ಧ ದೇಶದ ಎಲ್ಲೆಡೆ ವ್ಯಾಪಕವಾಗಿ ಪ್ರತಿಭಟನೆಗಳು ನಡೆದವು. ಇಲ್ಲಿ ಅಂಬೇಡ್ಕರವರು ಹೇಳಿರುವ ಮಾತುಗಳನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಭಾರತ ದೇಶವು ರಾಜಕೀಯವಾಗಿ ಪ್ರಜಾಸತ್ತಾತ್ಮಕವಾದರೂ ಸಾಮಾಜಿಕವಾಗಿ ಪ್ರಜಾಸತ್ತಾತ್ಮಕವಲ್ಲವೆಂದು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದರು. ಸಾಮಾಜಿಕವಾಗಿ ಅಂಚಿನಲ್ಲಿರುವ ಸಮುದಾಯಗಳ ಮೇಲೆ ಸತತವಾಗಿ ನಡೆಯುತ್ತಿರುವ ದಬ್ಬಾಳಿಕೆ ಮತ್ತು ಮೀಸಲಾತಿ ವಿರುದ್ಧ ಪ್ರತಿಭಟನೆಗಳು ಜೊತೆ-ಜೊತೆಯಾಗಿ ನಡೆಯುವದನ್ನು ನೋಡಿದರೆ ನಮ್ಮ ಸಮಾಜವು ಪ್ರಜಾಸತ್ತಾತ್ಮಕ ಸಮಾಜದ ಯಾವುದೇ ಲಕ್ಷಣಗಳನ್ನು ತೋರುತ್ತಿಲ್ಲ ಎಂದು ಅನಿಸುತ್ತದೆ.

ಮಂಡಲ ಆಯೋಗದ ಜಾರಿಗೆಯು ದೇಶದ ರಾಜಕೀಯ ಮತ್ತು ಆಡಳಿತ ವಲಯಗಳಲ್ಲಿ ಸಾಮಾಜಿಕ ಮಂಥನಕ್ಕೆ ಕಾರಣವಾಯಿತು. 1990ರಿಂದ ಮುಂದೆ ಸುಮಾರು 15 ವರ್ಷಗಳಿಗಿಂತಲು ಹೆಚ್ಚು ಹಿಂದುಳಿದ ವರ್ಗಗಳ ಜನರು ರಾಜಕೀಯ ಮತ್ತು ಆಡಳಿತಾತ್ಮಕ ಹುದ್ದೆಗಳಲ್ಲಿ ಮುಂಚೂಣಿಯಲ್ಲಿದ್ದು ಸಾಮಾಜಿಕ ನ್ಯಾಯದ ಭಾಷೆಗೆ ಹೊಸ ತಿರುವನ್ನು ಕೊಟ್ಟರು. ಈ ಬದಲಾವಣೆ ಹೆಚ್ಚು ಕಾಲ ಉಳಿಯಲಿಲ್ಲ. ಸಂಘ-ಪರಿವಾರದ ರಾಜಕೀಯ ಹಿಂದುತ್ವದಿಂದ ಸ್ಫೂರ್ತಿಗೊಂಡು ಹಿಂದುಳಿದ ಸಮಾಜದ ಜನರು ಬಿಜೆಪಿ ಕಡೆ ತಮ್ಮ ಒಲವನ್ನು ತೋರಿದರು. ದೇಶದ ಕೆಲವು ಪ್ರಾಂತ್ಯಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲ ಭಾಗಗಳಲ್ಲಿ ಈ ಹೊಸ ವಿದ್ಯಮಾನವನ್ನು ನೋಡಬಹುದು. ಇಲ್ಲಿ ಕಂಡುಬರುವ ವಿಪರ್ಯಾಸವೆಂದರೆ, ಯಾರಿಗಾಗಿ ಸಾಮಾಜಿಕ ಪ್ರಜಾಪ್ರಭುತ್ವ ಬೇಕಾಗಿದೆಯೋ ಅವರಲ್ಲಿಯೇ ಹಲವರು ಅದನ್ನು ಬಿಟ್ಟು ರಾಜಕೀಯ ಹಿಂದುತ್ವದ ಕಡೆಗೆ ಹೋಗುತ್ತಿರುವದು. ದಬ್ಬಾಳಿಕೆಗೆ ಒಳಗೊಂಡವರೆ ದಬ್ಬಾಳಿಕೆಯ ಪಕ್ಷವಾಗಿ ದಬ್ಬಾಳಿಕೆಯನ್ನು ಆಚರಿಸಿದರೆ ಸಬಲಿಕರಣದ ಮೂಲ ಆಶಯ ನಶಿಸಿ ಹೋಗುತ್ತದೆ.

ಭಾರತೀಯ ಜನತಾ ಪಕ್ಷವು ದ್ರೌಪದಿ ಮುರ್ಮುರವರು ಭಾರತದ 15ನೇಯ ರಾಷ್ಟ್ರಪತಿಯಾಗಿ ಆಯ್ಕೆಯಾಗುವದರಲ್ಲಿ ಪ್ರಮುಖ ಪಾತ್ರ ವಹಿಸಿತು. ಅವರ ಈ ಪ್ರಯತ್ನಕ್ಕೆ ಸಮಾನ ಮನಸ್ಸಿನ ಪಕ್ಷಗಳು ಕೂಡಾ ಬೆಂಬಲ ವ್ಯಕ್ತಪಡಿಸಿದವು. ರಾಮನಾಥ ಕೋವಿಂದರವರನ್ನು ದೇಶದ ರಾಷ್ಟ್ರಪತಿಯಾಗಿ ಆಯ್ಕೆ ಮಾಡುವದರಲ್ಲಿ ಬಿಜೆಪಿಯು ಯಾವ ಮುಖ್ಯ ಪಾತ್ರವಹಿಸಿತ್ತೋ ಅದೆ ಪಾತ್ರವನ್ನು ಮುರ್ಮುರವರ ಆಯ್ಕೆಯಲ್ಲಿ ವಹಿಸಿರುವದು ಸ್ವಾಗತಾರ್ಹವಾಗಿದೆ. ಮೊದಲಿನ ರಾಷ್ಟ್ರಪತಿಯವರು ದಲಿತ ಸಮುದಾಯದವರಾಗಿದ್ದರೆ ಮುರ್ಮುರವರು ಪರಿಶಿಷ್ಟ ಪಂಗಡದವರಾಗಿದ್ದಾರೆ. ದೇಶದ ಸ್ವತಂತ್ರ ನಂತರದ ರಾಜಕೀಯದಲ್ಲಿ ಆದಿವಾಸಿ ಮತ್ತು ದಲಿತ-ಬಹುಜನರಿಗೆ ರಾಜಕೀಯ ಪ್ರಾತಿನಿಧ್ಯ ಕೊಡುವದರಲ್ಲಿ ಕಾಂಗ್ರೆಸ್ ಪಕ್ಷ ಯಾವ ಪಾತ್ರವನ್ನು ವಹಿಸಿತ್ತೋ ಅದೇ ಪಾತ್ರವನ್ನು ಬಿಜೆಪಿಯು ಮುಂದುವರಿಸಿದೆ. ಈ ಮುಂದುವರಿಕೆಯ ಕಾರಣಗಳು ಬೇರೆ ಇದ್ದರೂ ಕೂಡಾ ಅದನ್ನು ಮುಂದುವರೆಸಿದೆ ಎಂಬುವ ವಿಷಯವೇ ಸಮಾಧಾನಕರ. ಬಲ ಸಂಘಟನೆಗಳ ಇಂತಹ ನಿರ್ಧಾರಗಳನ್ನು ಕೆಲವು ಬುದ್ಧಿ ಜೀವಿಗಳು ಸ್ವಾಗತಿಸುವದಲ್ಲದೆ ಅನ್ಯ ರಾಜಕೀಯ ಪಕ್ಷಗಳನ್ನು ವಿಮರ್ಷಿಸುತ್ತಿದ್ದಾರೆ. ಅವರ ಪ್ರಕಾರ ಅನ್ಯ ಪಕ್ಷಗಳು ಹಿಂದುಳಿದ ಜನರಿಗೆ ರಾಜಕೀಯ ಪ್ರಾತಿನಿಧ್ಯ ಕೊಡುವದರಲ್ಲಿ ಪೂರ್ಣ ಹೃದಯದ ಪ್ರಯತ್ನ ಮಾಡಿಲ್ಲವೆಂದು. ಇಲ್ಲಿ ನಾವು ವಿಚಾರಿಸಬೇಕಾದದ್ದು ಯಾವ ಪಕ್ಷಗಳು ಎಷ್ಟರ ಮಟ್ಟಿಗೆ ಪ್ರಾತಿನಿಧ್ಯ ಕೊಟ್ಟಿದೆ ಎಂಬುವದಲ್ಲ. ಈ ರೀತಿಯ ಪ್ರಾತಿನಿಧ್ಯದಿಂದ ಹಿಂದುಳಿದ ಸಮುದಾಯಗಳ ಧುರಿಣರು ಮೊದಲು ತಾವು ಖುದ್ದಾಗಿ ಸ್ವಯಂ ಗೌರವ ಮತ್ತು ಆತ್ಮ ಸ್ಥೈರ್ಯದಿಂದ ಬದುಕಿ ತಮ್ಮ ಸಮುದಾಯಗಳನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸ್ವಯಂ ಗೌರವ ಮತ್ತು ಆತ್ಮ ಸ್ಥೈರ್ಯದಿಂದ ಎಷ್ಟರ ಮಟ್ಟಿಗೆ ಬದುಕಲು ಪಾತ್ರರಾಗಿದ್ದಾರೆ ಎಂಬುವದನ್ನು ನೋಡಬೇಕು. ಹಿಂದುಳಿದ ಸಮುದಾಯಗಳಿಗಾಗಿ ಕಾಂಗ್ರೆಸ್ ಪಕ್ಷವು ಮತ್ತು ಇತರ ಪಕ್ಷಗಳು (ಎಡ ಪಕ್ಷಗಳು ಒಳಗೊಂಡು) ಮಾಡಿರುವ ರಾಜಕೀಯ ಪ್ರಾತಿನಿಧ್ಯ ಮತ್ತು ಸಬಲಿಕರಣದ ಪ್ರಯತ್ನಗಳು ಸಂಪೂರ್ಣ ಸಫಲವೆನಿಸದಿದ್ದರೂ ಸಬಲಿಕರಣಕ್ಕೆ ದಾರಿ ಮಾಡಿ ಕೊಡುವ ಅನೇಕ ನಾಯಕರುಗಳನ್ನು ಕೊಟ್ಟಿವೆ. ಉದಾಹರಣೆಗಾಗಿ ಕಾಮರಾಜ ನಾಡಾರ, ದೇವರಾಜ್ ಅರಸ, ಮಲ್ಲಿಕಾರ್ಜುನ ಖರ್ಗೆ, ಸಿದ್ಧರಾಮಯ್ಯರವರ ಹೆಸರುಗಳನ್ನು ನಾವು ಇಲ್ಲಿ ಉಲ್ಲೇಖಿಸಬಹುದು. ಭಾರತೀಯ ಜನತಾ ಪಕ್ಷದಿಂದ ಇಂತಹ ಕೊಡುಗೆಗಳು ಕಡಿಮೆ. ಇಲ್ಲಿ ಹೇಳಲೇಬೇಕಾದ ವಿಷಯವೇನಂದರೆ, ಕೋವಿಂದರಂತಹ ಮತ್ತು ಮುರ್ಮರವರಂತಹ ಧುರಿಣರು ಸಂಘ-ಪರಿವಾರದ ಸೈದ್ಧಾಂತಿಕ ಚೌಕಟ್ಟಿನಲ್ಲಿಯೇ ಕಾರ್ಯ ನಿರ್ವಹಿಸುವವರು. ಒಂದರ್ಥದಲ್ಲಿರುವ ಸಂಘ-ಪರಿವಾರದ ಶಕ್ತಿಗಳ ಪುರೋಹಿತಶಾಹಿಯನ್ನು ಇಂತಹ ನಾಯಕರುಗಳಿಂದ ವಿರೋಧಿಸಲಿಕ್ಕಾಗುದಿಲ್ಲ. ಹೀಗಿರುವಾಗ, ಇವರಿಂದ ಯಾವುದೇ ಮಹತ್ತರ ಸಾಮಾಜಿಕ ಬದಲಾವಣೆಯ ನಿರ್ಧಾರಗಳನ್ನು ನಿರೀಕ್ಷಿಸುವಂತಿಲ್ಲ.

ಇತ್ತೀಚೆಗೆ ಕರ್ನಾಟಕದಲ್ಲಿ ಸಿದ್ದಿ ಜನಾಂಗದ ನಾಯಕರಾದ ಶಾಂತಾರಾಮ ಸಿದ್ದಿ ಅವರನ್ನು ಬಿಜೆಪಿಯು ರಾಜ್ಯ ವಿಧಾನ ಪರಿಷತ್ತಿಗೆ ಆಯ್ಕೆ ಮಾಡಿರುವುದು ಸ್ವಾಗತಾರ್ಹ ಕೆಲಸವಾಗಿದೆ. ಇದನ್ನು ನಾವು ಐತಿಹಾಸಿಕ ಘಟನೆ ಎಂದು ಪರಗಣಿಸಿದರೆ ತಪ್ಪೇನಿಲ್ಲ. ಸಿದ್ದಿ ಜನಾಂಗವು ನಮ್ಮ ಸಮಾಜದ ಭಾಗವೆಂದು ಗೊತ್ತೇ ಇರದ ಸಮಯದಲ್ಲಿ ಅವರಲ್ಲಿರುವ ಒಬ್ಬರಿಗೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಿದರೆ ಅದೊಂದು ದೊಡ್ಡ ಕಾರ್ಯ. ಆದರೆ, ಈ ಸಬಲಿಕರಣ ರಾಜಕೀಯಕ್ಕೆ ಮಾತ್ರ ಸೀಮಿತಗೊಳ್ಳಬಾರದು. ಅವರಲ್ಲಿಯೂ ಕೂಡಾ ಅವರು ಈ ಸಮಾಜದ ಭಾಗವೆಂದು ಭಾವನೆ ಬರಬೇಕು. ಅವರಲ್ಲಿ ಈ ಭಾವನೆ ಬರಬೇಕಾದರೆ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯಲ್ಲಿ ಬದಲಾವಣೆಯಾಗಬೇಕು.

ಕೇವಲ ರಾಜಕೀಯ ಹಿಂದುತ್ವಿಕರಣಕ್ಕೆ ಗಮನ ಕೊಡದೆ ಸಾಮಾಜಿಕ ನ್ಯಾಯದಡಿ ಸಾಮಾಜಿಕ ಹಿಂದುತ್ವಿಕರಣಕ್ಕೆ ಪ್ರಾಮುಖ್ಯತೆ ಕೊಟ್ಟರೆ ಹಿಂದು ಸಮಾಜದಲ್ಲಿ ಸಮಾನತೆಯ ಕಲ್ಪನೆಯನ್ನು ಸಾಕಾರಗೊಳ್ಳಿಸಬಹುದು. ಸಾಮಾಜಿಕ ಹಿಂದುತ್ವಿಕರಣ ಕಲ್ಪನೆಯ ಅರ್ಥವೇನಂದರೆ, ಬುದ್ಧ-ಬಸವ-ವಿವೇಕಾನಂದ, ನಾರಾಯಣ ಗುರು, ಅಂಬೇಡ್ಕರ ಮತ್ತು ಇನ್ನಿತರ ಮಾನವತಾ ವಾದಿಗಳ ಆಶಯದಂತೆ ದಲಿತ-ಬಹುಜನರ ಸಮಗ್ರ ಕಲ್ಯಾಣವನ್ನು ನೈಜವಾಗಿಸಿ ಅವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸ್ವತಂತ್ರವಾಗಿ ಬದುಕುವ ಮಾರ್ಗದ ಪ್ರಕ್ರಿಯೆ. ಈ ಪ್ರಕ್ರಿಯೆಯನ್ನು ನಾವು ಸಾಮಾಜಿಕ ಸುಧಾರಣೆ ಎಂದು ಕರೆಯಬಹುದು. ಈ ಮಾರ್ಗದ ಪ್ರಕ್ರಿಯೆಯು ಯಾವುದೇ ಧರ್ಮ ಮತ್ತು ಜನಾಂಗದ ವಿರೋಧಿಯಲ್ಲ. ಅದು ವಿರೋಧಿಯಾಗಿ ಹಿಂಸಾತ್ಮಕ ಚಟುವಟಿಕೆಯಲ್ಲಿ ಭಾಗಿಯಾದರೆ ಅದನ್ನು

ಸಾಮಾಜಿಕ ಸುಧಾರಣೆಯೆಂದು ಕರೆಯಲಿಕ್ಕಾಗುವದಿಲ್ಲ. ಸಾಮಾಜಿಕ ಸುಧಾರಣೆ ಪ್ರಕ್ರಿಯೆಯಲ್ಲಿ ಆದ್ಯತೆಯಾಗಿ ಮಾಡಬೇಕಾದ ಕೆಲಸಗಳೆಂದರೆ ಅಂತರ್ಜಾತಿ ವಿವಾಹ ಮತ್ತು ಪುರೋಹಿತನದಲ್ಲಿ ಸಮಾನ ಪಾಲ್ಗೊಳ್ಳುವಿಕೆ. ಇವುಗಳು ಹೇಳಿದಷ್ಟು ಸುಲಭವಲ್ಲ. ಆದರೆ, ನಾವೆಲ್ಲಾ ಒಂದು ಎಂಬ ಭಾವನೆ ಬರಬೇಕಾದರೆ ಇವುಗಳ ಅವಶ್ಯವಿದೆ. ಸಾಮಾಜಿಕ ಹಿಂದುತ್ವಿಕರಣ ಅಥವಾ ಸಾಮಾಜಿಕ ಸುಧಾರಣೆ ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತತೆಯಿಂದ ಮಾತ್ರ ಸಾಧ್ಯ. ಹಿಂದು ಸಮಾಜದಂತೆ, ಭಾರತೀಯ ಇಸ್ಲಾಂ, ಕ್ರಿಶ್ಚಿಯನ್ ಧರ್ಮ ಮತ್ತು ಸಿಖ್ ಧರ್ಮಗಳಲ್ಲಿ ಆಂತರಿಕ ವ್ಯತ್ಯಾಸಗಳು ಮತ್ತು ತಾರತಮ್ಯಗಳನ್ನು ಕಾಣಬಹುದು. ಸಾಮಾಜಿಕ ಸುಧಾರಣೆ ಅಥವಾ ಸಾಮಾಜಿಕ ಇಸ್ಲಾಮಿಕರಣ, ಕ್ರಿಶ್ಚಿಯನ್ನಿಕರಣ, ಸಿಖ್ಖಿಕರಣದಿಂದ ಈ ಎಲ್ಲ ಸಮಾಜಗಳನ್ನು ಅಲ್ಲಿರುವ ತಾರತಮ್ಯಗಳಿಂದ ಪಾರು ಮಾಡಿದರೆ ಸಮೃದ್ಧ ಜಾತ್ಯಾತೀತ ಭವ್ಯ ಭಾರತವನ್ನು ಕಟ್ಟಬಹುದು.

ರಾಜ್ಯದ ಕಡಲುತೀರದ ಜಿಲ್ಲೆಗಳಾದ ಉಡುಪಿ ಮತ್ತು ಮಂಗಳೂರ ಎರಡು ದಶಕಗಳ ಹೆಚ್ಚಿನ ಕಾಲದಿಂದ ಕೋಮುವಾದಿ ರಾಜಕೀಯಕ್ಕೆ ತುತ್ತಾಗಿವೆ. ಇಂತಹ ರಾಜಕೀಯದ ಪರಿಣಾಮವಾಗಿ ಅನೇಕ ಸಾವು-ನೋವುಗಳು ಘಟಿಸಿದ ಕಾರಣ ಖಿನ್ನತೆಗೆ ಒಳಗಾದ ವರ್ಗಗಳು ಅಥವಾ ಸಮಾಜದ ಅಂಚಿನಲ್ಲಿರುವ ಸಮುದಾಯಗಳು ಬಹಳಷ್ಟು ತೊಂದರೆಗೆ ಒಳಗಾಗಿವೆ. ಕೋಮುವಾದದ ಆಧಾರದ ಮೇಲೆ ಬಹಳಷ್ಟು ಬಾರಿ ಇಲ್ಲಿ ನಡೆಯುವ ಹಿಂಸಾತ್ಮಕ ಘಟನೆಗಳಲ್ಲಿ ಬಲಿ ಪಶು ಆಗುವವರು ಬಡ ಮುಸ್ಲಿಂ ಮತ್ತು ಬಡ ಹಿಂದು ಯುವಕರು. ಕೋಮುವಾದಿ ಕಲಹಗಳಿಂದ ರಾಜಕೀಯ ಲಾಭ ಪಡೆಯುತ್ತಿರುವ ಯಾವುದೆ ರಾಜಕೀಯ ಪಕ್ಷದ ಧುರಿಣರ ಸಂಬಂಧಿಕರು ಇಂತಹ ಘಟನೆಗಳಲ್ಲಿ ಕಾಣಿಸಿಕೊಳ್ಳುವದಿಲ್ಲ. ಪಂಕ್ತಿಭೇದ ಮತ್ತು ಅನೇಕ ಸಾಮಾಜಿಕ ಸಮಸ್ಯೆಗಳನ್ನು ಇಲ್ಲಿನ ಬಹುತೇಕ ಧಾರ್ಮಿಕ ಸಂಸ್ಥೆಗಳು ಗಂಭೀರವಾಗಿ ಪರಿಗಣಿಸದೆ ಇರುವದರಿಂದ ಸಾಮಾಜಿಕ ಸಮಾನತೆ ದೂರದ ಮಾತಾಗಿದೆ. ಒಂದರ್ಥದಲ್ಲಿ, ಇಂತಹ ಸಮಾನತೆಯ ವಿಷಯ ಹಿಂದುತ್ವವಾದಿ ರಾಜಕೀಯ ಶಕ್ತಿಗಳಿಗೂ ಮತ್ತು ಧಾರ್ಮಿಕ ಸಂಸ್ಥೆಗಳಿಗೂ ಬೇಕಾಗಿಲ್ಲ ಎಂದು ತೋರುತ್ತಿದೆ. ಈ ವಿದ್ಯಮಾನ ದೇಶದ ಎಲ್ಲ ಭಾಗಗಳಲ್ಲಿಯೂ ಕಾಣಬಹುದು. ಬಡವ, ಹಿಂದುಳಿದ ಯುವಕರು ಗಲಭೆಗಾಗಿ ಬೇಕು. ಆದರೆ ಸಮಾನತೆಯ ಅನುಭವಕ್ಕೆ ಬೇಡ ಎಂಬ ಮನಸ್ಥಿತಿ ಕೋಮುವಾದಿ ಸಂಘ-ಸಂಸ್ಥೆಗಳ ಮತ್ತು ಅವುಗಳ ನಾಯಕರದು ಎಂದು ಕಾಣಿಸುತ್ತದೆ.

ನಾವೆಲ್ಲಾ ಹಿಂದು, ನಾವೆಲ್ಲಾ ಒಂದು ಎನ್ನುವ ಸಂಘ-ಸಂಸ್ಥೆಗಳು ಮತ್ತು ಅವುಗಳ ಧುರಿಣರು ಸಮಾಜದ ಜನರಲ್ಲಿ ಅಂತಹ ಭಾವನೆ ಬರಬೇಕಾದರೆ ಸಾಮಾಜಿಕ ಸಮಾನತೆಯನ್ನು ಸೃಷ್ಟಿಸಬೇಕಾಗುತ್ತದೆ. ಸಮಾಜದಲ್ಲಿನ ವ್ಯವಸ್ಥೆಯು ಜಾತಿ, ಧರ್ಮ, ಜನಾಂಗ ಮತ್ತು ಇತರೆ ಸಾಮಾಜಿಕ ಗುಂಪುಗಳ ಆಧಾರದ ಮೇಲೆ ಶ್ರೇಣೀಕೃತಗೊಂಡು ಅವುಗಳ ನಡುವೆ ತಾರತಮ್ಯ ಕಾಣಿಸಿಕೊಂಡರೆ ಐಕ್ಯತೆಯ ಮತ್ತು ನಾವೆಲ್ಲಾ ಒಂದು ಎನ್ನುವ ಭಾವನೆ ಬರುವದು ಬಹಳ ಕಷ್ಟಕರ. ದಯವೇ ಧರ್ಮದ ಮೂಲ, ಕಾಯಕವೇ ಕೈಲಾಸ, ಅರಿವೇ ಗುರು ಮುಂತಾದ ಅನುಭಾವಿಕ ಮಾತುಗಳನ್ನು ನುಡಿದು ಅವುಗಳ ಪ್ರಕಾರ ನಡೆದಿರುವ ಶರಣರು, ವರಕರಿ ಚಳುವಳಿಯ ಸಂತರು, ಸಿಖ್ ಸಂತರು, ಬೌದ್ಧ ದಾರ್ಶನಿಕರು, ಸೂಫಿ ಸಂತರು ಸಾಮಾಜಿಕ ಹಿಂದುತ್ವಿಕರಣಕ್ಕೆ ಅಥವಾ ಸಾಮಾಜಿಕ ಸಧಾರಣೆಗೆ ಮಾದರಿಯಾಗ ಬೇಕು. ಇವರೆಲ್ಲರ ತತ್ವ ನುಡಿಗಳು ನಡೆಯಾಗಬೇಕಾದರೆ ನಮಗೆ ಮಾರ್ಗದರ್ಶಿಯಾಗಿ ಪುರೋಹಿತಶಾಹಿಯನ್ನು ಎದುರಿಸಲು ಬಹುಜನ ಸಿದ್ಧಾಂತ ಮತ್ತು ಬಂಡವಾಳಶಾಹಿಯನ್ನು ಎದುರಿಸಲು ಕಾರ್ಲ ಮಾರ್ಕ್ಸರ ಸಿದ್ಧಾಂತದ ಅತ್ಯಗತ್ಯವಿದೆ. ಮಾನವನ ಭೌತಿಕ ಮತ್ತು ಸಾಂಸ್ಕೃತಿಕ ಸ್ಥಿತಿ-ಗತಿಯಲ್ಲಿ ಬದಲಾವಣೆಯಾದರೆ ಮಾತ್ರ ಅವನು, ಅವಳು ಮಾನವ ಪರಕೀಯತೆಯಿಂದ ದೂರಾಗಿ ಎಲ್ಲ ತರಹದ ಸ್ವಾತಂತ್ರ್ಯವನ್ನು ಆನಂದಿಸಬಹುದು. ಮಾನವನ ಈ ಸದಾಕಾಲದ ಅನುಭವಕ್ಕಾಗಿ ಪ್ರಗತಿಪರ ಸಿದ್ಧಾಂತಗಳಾದ ಬಹುಜನ ಸಿದ್ಧಾಂತ ಮತ್ತು ಕಾರ್ಲ ಮಾರ್ಕ್ಸರ ಸಮಾಜವಾದ ಪ್ರಚಲಿತ ಮತ್ತು ಅವಶ್ಯ.

## ಎಂದಿನಂತೆ "ಈ" ದಿನವೂ..

ಏನಿದೆ, ವಿಶೇಷ ಈ ದಿನಕ್ಕೆ?
ಎಂದಿನಂತೆ ಈ ದಿನವೂ ಬಂದಿದೆ:
ನನ್ನ ಹುಟ್ಟಿದ ದಿನವೆಂದು
ಸೂರ್ಯ ಬೇಗ ಬರಲಿಲ್ಲ
ಬೇಗ ಮುಳುಗುವುದು ಇಲ್ಲ
ಇರುವ ತನ್ನದೇ ಲೆಕ್ಕಾಚಾರದಲ್ಲೇ!

ಎಂದಿನಂತೆ, ಎದ್ದು
ಜನ್ಮ ಕೊಟ್ಟ ತಾಯಿ- ತಂದೆಗೆ
ಸ್ಮರಿಸಿ, ನನ್ನ ಕಾಯಕಕ್ಕೆ ಹೊರಟಿರುವೆ

ಉಳ್ಳವರಿಗೆ
ಇದ್ದರೂ ಇರಬಹುದು ವಿಶೇಷತೆ;
ಅವರ ಹುಟ್ಟಿದ ದಿನಕ್ಕೆ
ಹಾರ-ತುರಾಯಿ,
ಫ್ಲೆಕ್ಸ್ ಬೋರ್ಡುಗಳಲ್ಲಿ ಫೋಟೋ
ಶುಭ ಹಾರೈಕೆಗಳ, ಸುರಿಮಳೆ
ಮೋಜು, ಮಸ್ತಿ, ಗುಂಡು, ತುಂಡು!!

ನನಗೆ ಅದು, ಕ್ಯಾಲೆಂಡರಿನ;
ಒಂದು ದಿನ ಮಾತ್ರ
ವರ್ಷವೂ ಬರುತ್ತದೆ
ಹಾಗೆಯೇ ಹೊರಟು ಹೋಗುತ್ತೆ
ಸೂರ್ಯನ ಲೆಕ್ಕಾಚಾರದಂತೆ

**- ಎಚ್.ಕೆ. ಕೊಟ್ರಪ್ಪ, ಹರಿಹರ**